ಇತರ ಸದಸ್ಯರ ಕಾಲಾವಧಿ ಅವರ ವೇತನ ಭತ್ಯೆ ಇತ್ಯಾದಿ ಸವಲತ್ತುಗಳು, ಆಯೋಗದ ವ್ಯವಹಾರ ನಿರ್ವಹಣೆ ವಿಧಾನ, ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾದ ವಾರ್ಷಿಕ ವರದಿ ಹಾಗೂ ಆಯೋಗದ ಆರ್ಥಿಕ ಅಧಿಕಾರಗಳನ್ನು ವಿವರಿಸಲಾಗಿದೆ.

ಆ) ಹೌದು, ಅವಶ್ಯವಿದ್ದಲ್ಲಿ, ಕ್ರಮವನ್ನು ವಹಿಸಲಾಗುವುದು.

ಇ) ಮಕ್ಕಳ ಹಕ್ಕುಗಳ ರಕ್ಷಣೆಯ ಆಯೋಗಗಳ ಅಧಿನಿಯಮ 2005ರ ಪ್ರಕರಣ 24 ಮತ್ತು 13(1) ರಲ್ಲಿ ಆಯೋಗದ ಅಧಿಕಾರ, ಕಾರ್ಯಗಳನ್ನು ನಿಗಧಿಪಡಿಸಲಾಗಿದೆ.

ಭಾಗ್ಯ ಲಕ್ಷ್ಮಿ ಯೋಜನೆಯ ಅನುಷ್ಠಾನ

403 (944) ಶ್ರೀ ಹ್ಯಾರೀಶ್ ಎನ್.ಎ (ಶಾಂತಿನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮಿ ಯೋಜನೆಯಡಿಯಲ್ಲಿ ಈವರೆಗೆ ಗುರುತಿಸಲಾಗಿರುವ ಒಟ್ಟು ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಯೋಜನೆಯ ಫಲಾನುಭವಿಗಳೆಲ್ಲರಿಗೂ ಬಾಂಡ್ ಒದಗಿಸಿ ಕೊಡಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಇ) 2008–09ನೇ ಮತ್ತು 2009–10ನೇ ಸಾಲಿಗಾಗಿ ಎಷ್ಟು ಫಲಾನುಭವಿಗಳನ್ನು ಗುರುತಿಸಿ ಬಾಂಡ್ ನೀಡಲಾಗಿದೆ;

ಈ) ಸದರಿ ಯೋಜನೆಯಡಿಯಲ್ಲಿ ಮಕ್ಕಳು ಅಂಗನವಾಡಿಯಲ್ಲಿಯೇ ಓದಬೇಕೆಂಬ ನಿಯಮವನ್ನು ಸಡಿಲಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಬಡ ಜನರಿಗೆ ಅನುಕೂಲವಾಗಬಹುದಾದ ಯೋಜನೆಯನ್ನು ಹೆಚ್ಚು ವ್ಯವಸ್ಥಿತಗೊಳಿಸಲು ಸರ್ಕಾರದ ಕ್ರಮಗಳೇನು?

ಶ್ರೀ. ಪಿ.ಎಂ. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು) :

ಅ) ಈವರೆವಿಗೆ 9,49,167 ಫಲಾನುಭವಿಗಳನ್ನು ಗುರುತಿಸಲಾಗಿದೆ. ಜಿಲ್ಲಾವಾರು ಫಲಾನುಭವಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) 9,49,167 ಫಲಾನುಭವಿಗಳ ಪೈಕಿ 7,20,562 ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗಿದ್ದು ಅನುದಾನ ಲಭ್ಯವಾದ ಕೂಡಲೇ ಎಲ್ಲಾ ಫಲಾನುಭವಿಗಳಿಗೆ ಬಾಂಡ್ ವಿತರಿಸಲಾಗುವುದು.

ಇ) 2008–09 ಮತ್ತು 2009–10 ಸಾಲಿನಲ್ಲಿ 4,29,900 ಫಲಾನುಭವಿಗಳನ್ನು ಗುರುತಿಸಿ ಬಾಂಡ್ ವಿತರಿಸಲಾಗಿದೆ.

ಈ) ಫಲಾನುಭವಿ ಹೆಣ್ಣು ಮಗು ಅಂಗನವಾಡಿಯಲ್ಲಿಯೇ ಓದಬೇಕೆಂಬ ನಿಯಮವಿರುವುದಿಲ್ಲ, ಯಾವುದೇ ಶಾಲಾಪೂರ್ವ ಶಿಕ್ಷಣ ಕೇಂದ್ರಕ್ಕೆ ಹಾಜರಾಗಬಹುದು ಆದರೆ ಅಂಗನವಾಡಿಗಳಿರುವ ಪ್ರದೇಶಗಳಲ್ಲಿ ಈ ಯೋಜನೆಯಡಿಯಲ್ಲಿ ದಾಖಲಾದ ಹೆಣ್ಣು ಮಗುವು 0–6 ವರ್ಷದವರೆಗೆ ನಿರಂತರವಾಗಿ ಅಂಗನವಾಡಿ ಕೇಂದ್ರಕ್ಕೆ ಹಾಜರಾಗಬೇಕು ಹಾಗೂ ನಂತರದಲ್ಲಿ ಶಿಕ್ಷಣ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಶಾಲೆಗಳಲ್ಲಿ ದಾಖಲಾಗಿ ವ್ಯಾಸಂಗವನ್ನು ಮುಂದುವರಿಸಬೇಕಾಗಿದೆ. ಮಕ್ಕಳು ಹುಟ್ಟಿದಾಗಿನಿಂದ 18 ವರ್ಷ ತಲುಪವವರೆಗೆ ಮಕ್ಕಳ ಅಭಿವೃದ್ಧಿಯನ್ನು ಹಿಂಬಾಲಿಸುವ ಸಲುವಾಗಿ ಎನ್.ಐ.ಸಿ. ಸಂಸ್ಥೆಯ ಸಹಯೋಗದೊಂದಿಗೆ ಚೈಲ್ಡ್ ಟ್ರ್ಯಾಕಿಂಗ್ ಸಾಫ್ಟ್‌ವೇರ್ ತಯಾರಿಸಲಾಗಿದೆ.

ಅನುಬಂಧ

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 944

ಭಾಗ್ಯಲಕ್ಷ್ಮಿ ಯೋಜನೆಯಡಿ ಗುರುತಿಸಲಾಗಿರುವ ಫಲಾನುಭವಿಗಳ ಜಿಲ್ಲಾವಾರು ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	38280
2	ಬೆಂಗಳೂರು (ನ)	50726
3	ಬೆಂಗಳೂರು (ಗ್ರಾ)	14223
4	ರಾಮನಗರ	20679
5	ಬೆಳಗಾಂ	90015
6	ಬಳ್ಳಾರಿ	43245
7	ಬೀದರ್	25421

8	ಬಿಜಾಪುರ	38754
9	ಚಾಮರಾಜನಗರ	17943
10	ಚಿಕ್ಕಮಗಳೂರು	18148
11	ಚಿತ್ರದುರ್ಗ	32668
12	ದಕ್ಷಿಣ ಕನ್ನಡ	10205
13	ದಾವಣಗೆರೆ	40784
14	ಧಾರವಾಡ	22234
15	ಗದಗ	24055
16	ಗುಲ್ಬರ್ಗ	75049
17	ಹಾಸನ	30392
18	ಹಾವೇರಿ	39231
19	ಕೊಡಗು	5329
20	ಕೋಲಾರ	22860
21	ಚಿಕ್ಕಬಳ್ಳಾಪುರ	22071
22	ಕೊಪ್ಪಳ	26589
23	ಮಂಡ್ಯ	38678
24	ಮೈಸೂರು	49622
25	ರಾಯಚೂರು	37077
26	ಶಿವಮೊಗ್ಗ	29554
27	ತುಮಕೂರು	52690
28	ಉಡುಪಿ	13663
29	ಉತ್ತರ ಕನ್ನಡ	19012
ಒಟ್ಟು		**949167**